37 P.U. Colleges in Mysore. During the year 1998-99 permission is given to two new Colleges. During the year 1999-2000 permission is given to one new PU college. Proposals for sanction for 3 more P.U.Colleges are under consideration, if there are basic facilities in these institutions, there is a possibioity of these colleges being started during this academic year itself. There is no need for giving permission to new additional sections as there are sufficient number of seats available against the demand.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮುಚ್ಚುವ ಪ್ರಸ್ತಾಪನೆ

1070(1500)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮುಚ್ಚಲು ಸರ್ಕಾರದವರು ತೀರ್ಮಾನಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಇದರಿಂದ ನಗರ ಪ್ರದೇಶದ ನಾಗರೀಕರಿಗೆ ಆಗುವ ತೊಂದರೆ ತಪ್ಪಿಸಲು ಅದನ್ನು ಪುನರ್ ಪರಿಶೀಲಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಡಾ II ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.)

ಅ) ಈ ಸಂಬಂಧ ಸರ್ಕಾರವು ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) Withdrawal of teachers under new policy

1071(1521)

Sri D.V. Sadananda Gouda (Puthur)

Will the Hon. Minister for primary & Secomdary Education be pleased to state

a) Whether it has come to the notice of the Government that there are problems in educational field due to withdrawal of teachers under new policy ?

b) If so, which are those ?

c) What are the preventive steps taken by Government in this regard ?

d) Whether there is any proposal to appoint a teacher to each class

e) If so, when it will be implemented ?

Sri. H.G.Govinde Gowda (Minister for Primary and Secondary Education.)

a) No.

b) Does not arise.

c) Does not arise.

d) Yes.

e) It will be examined taking into consideration of the requirment and

financial position of the State.

ನೂತನ ಗ್ರಾಮ ಪಂಚಾಯತ್ ವ್ಯವಸ್ಥೆ

1032 (1522)

ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

೧. ಗ್ರಾಮ ಪಂಚಾಯತ್‌ನಿಂದ ಬದಲಾಗುತ್ತಿರುವ ಪಂಚಾಯತ್ ವ್ಯವಸ್ಥೆಯಲ್ಲಿ ನೂತನ ಪಂಚಾಯತ್ ನಿರ್ಮಾಣದಲ್ಲಿ ಕೇಂದ್ರ ಸ್ಥಾನಗಳನ್ನು ನಿಗಧಿಪಡಿಸುವ ಸಂದರ್ಭದಲ್ಲಿ ಸರ್ಕಾರ ಹಾಕಿಕೊಂಡಿರುವ ರೂಪು ರೇಷೆಗಳೇನು ?

೨. ಹೊಸ ಪಂಚಾಯತ್ ವ್ಯವಸ್ಥೆಯಲ್ಲಿ ತಾಲೂಕ್ ಪಂಚಾಯತ್ ವ್ಯವಸ್ಥೆಗೆ ಹೆಚ್ಚಿನ ಮಹತ್ವವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ತಾಲ್ಲೂಕು ಪಂಚಾಯತ್ ಸಮಿತಿಯನ್ನು ರದ್ದುಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ

೩. ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ತಾಲೂಕ್ ಪಂಚಾಯತ್‌ಸದಸ್ಯರುಗಳ ಕಾರ್ಯವ್ಯಾಪ್ತಿಯ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾ.ಅ.ಪಂ.ರಾಜ್ ಸಚಿವರು.)

೧. ನೂತನ ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಪುನರ್‌ವಿಂಗಡಣೆ ಮಾಡುವಾಗ ಜಿಲ್ಲಾಧಿಕಾರಿಯು ಗ್ರಾಮಪಂಚಾಯತಿಯ ಕೇಂದ್ರಸ್ಥಾನವನ್ನು ನಿಗಧಿಪಡಿಸಬೇಕಾಗಿರುತ್ತದೆ. ಈ ರೀತಿ ಮಾಡುವಾಗ ಆ ಹಳ್ಳಿಯು ಶಾಲೆ, ಆರೋಗ್ಯ ಕೇಂದ್ರ ಇತ್ಯಾದಿ ಸೌಕರ್ಯಗಳನ್ನು ಹೊಂದಿರಬೇಕು ಹಾಗೂ ಈ ಪಂಚಾಯತಿಗೆ ಒಳಪಡುವ ಗ್ರಾಮಗಳಿಗೆ ಸರಿಯಾಗಿ ಸಂಪರ್ಕಿಸುವಂತಿರಬೇಕು.

ಹಾಗೂ ಹಿಂದಿನ ಗ್ರಾಮ ಪಂಚಾಯತಿ ಅಥವಾ ಮಂಡಲ ಪಂಚಾಯತಿಗಳು ಮೂಲಭೂತ ಸೌಕರ್ಯಗಳನ್ನು ಹೊಂದಿರಬಹುದಾದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಗ್ರಾಮಗಳನ್ನು ಹೊಸದಾಗಿ ರಚಿಸಲಾಗಿರುವ ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನವನ್ನಾಗಿ ಅಧಿಸೂಚಿಸ ಬೇಕಾಗಿರುತ್ತದೆ. ಮತ್ತು ಮುಖ್ಯವಾಗಿ ಪಂಚಾಯತಿ ಪ್ರದೇಶದ ಸಾರ್ವಜನಿಕರ ಅನುಕೂಲತೆಯನ್ನು ಪರಿಗಣಿಸಿ ಕೇಂದ್ರಸ್ಥಾನವನ್ನು ನಿರ್ಧರಿಸಬೇಕಾಗುತ್ತದೆ.

೨. ಇಲ್ಲ . ತಾಲ್ಲೂಕು ಪಂಚಾಯತಿಗಳನ್ನು ರದ್ದು ಪಡಿಸುವ ಉದ್ದೇಶ ಸರ್ಕಾರಕ್ಕಿರುವುದಿಲ್ಲ.

೩. ಗ್ರಾಮಪಂಚಾಯತಿ ಅಧ್ಯಕ್ಷ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರ ಕಾರ್ಯವ್ಯಾಪಿಗೆ ಕ್ರಮವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ ಪ್ರಕರಣ 62ಮತ್ತು 147ರಲ್ಲಿ ಉಪಬಂಧ ಮಾಡಿರುವಂತೆ ಇರುತ್ತದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ವೈದ್ಯರುಗಳ ನೇಮಕಾತಿ.

1073(1523)

ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು)

ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರ ಒಟ್ಟು ಸಂಖ್ಯೆ ಎಷ್ಟು ? ಈ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು ?